# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 707 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅಡಗೂರು ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 11.12.2023 |
| ಉತ್ತರಿಸುವ ಸಚಿವರು | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಂಜೂರಾದ ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಹುದ್ದೆಗಳು ಎಷ್ಟು? | ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಂಜೂರಾದ ಹಾಗೂ ಮಂಜೂರಾದ ಹುದ್ದೆಗಳಲ್ಲಿ ದಿನಾಂಕ:31.10.2023ಕ್ಕೆ ಅನುದಾನಕ್ಕೊಳಪಟ್ಟಂತೆ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ. |
| (ಆ) | ಮಂಜೂರಾದ ಹುದ್ದೆಗಳಲ್ಲಿ ದಿನಾಂಕ:31.10.2023ಕ್ಕೆ ಅನುದಾನ ಕ್ಕೊಳಪಟ್ಟಂತೆ ಖಾಲಿ ಇರುವ ಹುದ್ದೆಗಳು ಎಷ್ಟು? | (see table below) |

| ಪದನಾಮ | ಮಂಜೂರಾದ ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|
| ಸಹಾಯಕ ಪ್ರಾಧ್ಯಾಪಕರು | 549 | 312 | 237 |
| ಸಹ ಪ್ರಾಧ್ಯಾಪಕರು | 232 | 79 | 153 |
| ಪ್ರಾಧ್ಯಾಪಕರು | 96 | 16 | 80 |
| **ಒಟ್ಟು** | **877** | **407** | **470** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು; ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣವೇನು? | ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ಈ ಕೆಳಕಂಡ 4 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿದ್ದು ವಿವರ ಕೆಳಕಂಡಂತಿದೆ. |

| ಪದನಾಮ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಲು ಅನುಮತಿ ನೀಡಲಾದ ಹುದ್ದೆಗಳು | ಪ್ರಸ್ತಾವನೆ ಸ್ವೀಕರಿಸಿದ್ದು, ಅನುಮತಿಸಲು ಪರಿಶೀಲನೆಯಲ್ಲಿರುವ ಹುದ್ದೆಗಳು | ಬಾಕಿ ಉಳಿದಿರುವ ಖಾಲಿ ಹುದ್ದೆಗಳು |
|---|---|---|---|---|
| ಸಹಾಯಕ ಪ್ರಾಧ್ಯಾಪಕರು | 237 | 18 | 12 | 207 |
| ಸಹ ಪ್ರಾಧ್ಯಾಪಕರು | 153 | 21 | 09 | 123 |
| ಪ್ರಾಧ್ಯಾಪಕರು | 80 | 1 | 09 | 70 |
| **ಒಟ್ಟು** | **470** | **40** | **30** | **400** |

1. ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ (ಅನುದಾನಿತ), ಬೆಂಗಳೂರು, ಈ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಲ್ಲಿ 8 ಸಹಾಯಕ ಪ್ರಾಧ್ಯಾಪಕರು, 11 ಸಹ ಪ್ರಾಧ್ಯಾಪಕರು ಹಾಗೂ 1 ಪ್ರಾಧ್ಯಾಪಕರ (ಒಟ್ಟು 20 ಹುದ್ದೆಗಳು) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ದಿನಾಂಕ:30.01.2020 ರಂದು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಅನುಮತಿ ನೀಡಲಾಗಿದೆ. ಸಂಸ್ಥೆಯವರು ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, 371(ಜೆ) ಗೆ

| | | |
|---|---|---|
| | | ಮೀಸಲಿರಿಸಲಾದ ಹುದ್ದೆಗಳಿಗೆ ವರ್ಗೀಕರಣ ಮಾಡಿ ಕ್ರಮ ಕೈಗೊಳ್ಳಬೇಕಾಗಿದ್ದು, ಸಂಸ್ಥೆಗೆ ರಿಕ್ತಸ್ಥಾನ ವಹಿಯನ್ನು ಅಪ್‌ಡೇಟ್ ಮಾಡಲು ತಿಳಿಸಲಾಗಿದೆ. ರಿಕ್ತಸ್ಥಾನ ವಹಿಯನ್ನು ಸಂಸ್ಥೆಯವರು ಅಪ್‌ಡೇಟ್ ಮಾಡಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.<br>2. ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಮಂಡ್ಯ, ಈ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಲ್ಲಿ 7 ಸಹಾಯಕ ಪ್ರಾಧ್ಯಾಪಕರು ಹಾಗೂ 6 ಸಹ ಪ್ರಾಧ್ಯಾಪಕರು (ಒಟ್ಟು 13 ಹುದ್ದೆಗಳು) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ತಾಂತ್ರಿಕ ಶಿಕ್ಷಣ ಇಲಾಖೆಯು ದಿನಾಂಕ:28.02.2020ರಂದು ಅನುಮತಿ ನೀಡಲಾಗಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br>3. ಮಲೆನಾಡು ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹಾಸನ, ಈ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಲ್ಲಿ 3 ಸಹಾಯಕ ಪ್ರಾಧ್ಯಾಪಕರು ಹಾಗೂ 4 ಸಹ ಪ್ರಾಧ್ಯಾಪಕರು (ಒಟ್ಟು 7 ಹುದ್ದೆಗಳು) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ತಾಂತ್ರಿಕ ಶಿಕ್ಷಣ ಇಲಾಖೆಯು ದಿನಾಂಕ:17.02.2020 ರಂದು ಅನುಮತಿ ನೀಡಲಾಗಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br>4. ಪಿಡಿಎ ಕಾಲೇಜ್ ಆಫ್ ಇಂಜಿನಿಯರಿಂಗ್, ಕಲಬುರ್ಗಿ ಸಂಸ್ಥೆಯು 12 ಸಹಾಯಕ ಪ್ರಾಧ್ಯಾಪಕರು, 9 ಸಹ ಪ್ರಾಧ್ಯಾಪಕರು ಹಾಗೂ 9 ಪ್ರಾಧ್ಯಾಪಕರ (ಒಟ್ಟು 30 ಹುದ್ದೆಗಳು) ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಕಾರ್ಯಭಾರ ವರದಿಯನ್ನು ಪಡೆಯಲಾಗಿದ್ದು, ಪ್ರಸ್ತುತ ಪರಿಶೀಲನೆಯಲ್ಲಿರುತ್ತದೆ.<br><br>7ನೇ ಪರಿಷ್ಕೃತ ಎಐಸಿಟಿಇ ನಿಯಮಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳುವ ಪ್ರಕ್ರಿಯೆಯು ಜಾರಿಯಲ್ಲಿದ್ದು, ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಯಾದ ನಂತರದಲ್ಲಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.<br><br>ಕರ್ನಾಟಕ ಶಿಕ್ಷಣ ಕಾಯ್ದೆ 41 ಮತ್ತು 46 ರನ್ವಯ ಅನುದಾನಿತ ಸಂಸ್ಥೆಗಳ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವು ಆಡಳಿತ ಮಂಡಳಿಯಾಗಿದ್ದು, 207 ಸಹಾಯಕ ಪ್ರಾಧ್ಯಾಪಕರು, 123 ಸಹ ಪ್ರಾಧ್ಯಾಪಕರು ಹಾಗೂ 70 ಪ್ರಾಧ್ಯಾಪಕರುಗಳನ್ನೊಳಗೊಂಡಂತೆ ಒಟ್ಟು 400 ಹುದ್ದೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳ ಆಡಳಿತ ಮಂಡಳಿಯು ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| (ಈ) | ಖಾಲಿ ಇರುವ ಹುದ್ದೆಗಳಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಇಲ್ಲ. |

ಕಡತ ಸಂಖ್ಯೆ:ಇಡಿ 489 ಟಿಇಸಿ 2023

(ಡಾ. ಎಂ.ಸಿ. ಸುಧಾಕರ್)
ಮಾನ್ಯ ಉನ್ನತ ಶಿಕ್ಷಣ ಸಚಿವರು